ಇ) ಈ ಪ್ರಕ್ರಿಯೆಯನ್ನು ಯಾವ ಕಾಲಾವಧಿಯಲ್ಲಿ ಪೂರ್ಣ ಗೊಳಿಸಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು):

ಅ) ಹೌದು.

ಆ) ಸರ್ಕಾರವು ವಿಶೇಷ ನೇಮಕಾತಿ ನಿಯಮಗಳನ್ನು ಅಂತಿಮವಾಗಿ ಪ್ರಕಟಿಸಿದ ನಂತರ ಆಯ್ಕೆ ಪ್ರಾಧಿಕಾರದ ಮೂಲಕ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸುವ ಅಂಕಗಳ ಅರ್ಹತೆ ಆಧಾರದ ಮೇಲೆ ಆಯ್ಕೆ ಮಾಡಲು ಸೂಕ್ತ ಕ್ರಮಕೈಗೊಳ್ಳಲಾಗುವುದು.

ಇ) ವಿಶೇಷ ನೇಮಕಾತಿ ನಿಯಮಗಳನ್ನು ಅಂತಿಮವಾಗಿ ಪ್ರಕಟಿಸಿದ ನಂತರ ಆಯ್ಕೆ ಪ್ರಕ್ರಿಯೆಯನ್ನು ಪ್ರಾರಂಭಿಸಿ ನಿಯಮಗಳಂತೆ ಕ್ರಮ ಕೈಗೊಳ್ಳಲಾಗುವುದು.

4779(5517) ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆ, ಅರಸೀಕೆರೆ ಕ್ಷೇತ್ರ ವ್ಯಾಪ್ತಿಯಲ್ಲಿ ಇತ್ತೀಚೆಗೆ ವಿದ್ಯುತ್ ಟ್ರಾನ್ಸ್ ಫಾರ್ಮರ್‌ಗಳು ಸುಟ್ಟು ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದಕ್ಕೆ ಕಾರಣಗಳೇನು; ಸುಟ್ಟು ಹೋಗಿರುವ ಟ್ರಾನ್ಸ್ ಫಾರ್ಮರ್‌ಗಳ ಸಂಖ್ಯೆ ಎಷ್ಟು (ಹೋಬಳಿವಾರು ವಿವರ ನೀಡುವುದು);

ಇ) ಸುಟ್ಟು ಹೋದ ಟ್ರಾನ್ಸ್ ಫಾರ್ಮರ್‌ಗಳ ಬದಲಿಗೆ ಹೊಸ ಟ್ರಾನ್ಸ್ ಫಾರ್ಮರ್ ಗಳನ್ನು ಅಳವಡಿಸಲು ಸರ್ಕಾರ ಕ್ರಮಕೈಗೊಂಡಿದೆಯೇ; ಇಲ್ಲದಿದ್ದಲ್ಲಿ ಕಾರಣವೇನು;

ಈ) ಸದರಿ ಟ್ರಾನ್ಸ್ ಫಾರ್ಮರ್‌ಗಳನ್ನು ರಿವೈಂಡಿಂಗ್ ಮಾಡಿಸುತ್ತಿರುವುದು ನಿಜವೇ; ಇದು ಉತ್ತಮ ಗುಣಮಟ್ಟದ್ದಲ್ಲವೆಂಬ ದೂರಿನ ಬಗ್ಗೆ ಸರ್ಕಾರದ ನಿಲುವೇನು; ಈ ಕಾರ್ಯವನ್ನು ಯಾರಿಗೆ ವಹಿಸಲಾಗಿದೆ;

ಉ) ಹಾಗಿದ್ದಲ್ಲಿ, ಒಂದು ಟ್ರಾನ್ಸ್ ಫಾರ್ಮರ್ ರಿವೈಂಡಿಂಗ್‌ಗಾಗಿ ನೀಡಲಾದ ಹಣವೆಷ್ಟು? (ವಿವರ ಒದಗಿಸುವುದು);

ಶ್ರೀ ಹೆಚ್.ಡಿ.ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಹಾಸನ ಜಿಲ್ಲೆ ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲಗೊಳ್ಳಲು ಪ್ರಮುಖ ಕಾರಣಗಳು;

1. ಅನಧಿಕೃತ ಪಂಪುಸೆಟ್ಟುಗಳ ಬಳಕೆಯಿಂದ ಉಂಟಾಗುವ ಓವರ್ ಲೋಡ್.

2. ಮುಂಗಾರಿನ ಕಾಲದಲ್ಲಿ ಆಗುವ ಪ್ರಕೃತಿ ವಿಕೋಪದಿಂದ ಅಂದರೆ ಗುಡುಗು, ಸಿಡಿಲು ಮತ್ತು ಮಿಂಚು, ಬಲವಾಗಿ ಬೀಸುವ ಗಾಳಿ ಮತ್ತು ಮಳೆಯ ಕಾರಣಗಳಿಂದ.

3. ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಬಹಳ ಕಾಲದಿಂದ ಬಳಕೆಯಲ್ಲಿದ್ದು ಹಳೆಯದಾಗಿದ್ದುದರಿಂದ.

ಅರಸೀಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಆರು ತಿಂಗಳಲ್ಲಿ ಅಂದರೆ ಜನವರಿ–5 ರಿಂದ ಜೂನ್–5 ರವರೆಗೆ ಒಟ್ಟು 256 ವಿತರಣಾ ಟ್ರಾನ್ಸ್ ಫಾರ್ಮರ್‌ಗಳು ವಿಫಲಗೊಂಡಿರುತ್ತವೆ. ಈ ಅವಧಿಯಲ್ಲಿ ಒಟ್ಟು 200 ವಿಫಲಗೊಂಡ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ಬದಲಾಯಿಸಲಾಗಿರುತ್ತದೆ. ವಿಫಲವಾದ ಮತ್ತು ಬದಲಾಯಿಸಲಾದ ವಿದ್ಯುತ್ ವಿತರಣಾ ಟ್ರಾನ್ಸ್ ಫಾರ್ಮರ್‌ಗಳ ಹೋಬಳಿವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಇ) ಸಾಮಾನ್ಯವಾಗಿ ವಿಫಲಗೊಂಡ ವಿದ್ಯುತ್ ವಿತರಣಾ ಟ್ರಾನ್ಸ್ ಫಾರ್ಮರ್‌ಗಳನ್ನು ದುರಸ್ತಿಗೊಳಿಸಲಾದ ವಿತರಣಾ ಟ್ರಾನ್ಸ್ ಫಾರ್ಮರ್‌ಗಳ ಮೂಲಕ ಬದಲಾಯಿಸಲಾಗುತ್ತದೆ. ಒಂದು ವೇಳೆ ದುರಸ್ತಿಗೊಂಡ ವಿತರಣಾ

ಟ್ರಾನ್ಸ್ ಫಾರ್ಮರ್‌ಗಳು ಲಭ್ಯವಿಲ್ಲದಿದ್ದಲ್ಲಿ ಅಂತಹ ಸಂದರ್ಭಗಳಲ್ಲಿ ಹೊಸ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಮೂಲಕ ಬದಲಾಯಿಸಲಾಗುವುದು.

ಈ) ವಿಫಲಗೊಂಡ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ತಿಗೊಳಿಸಿ ಪುನಃ ಉಪಯೋಗಿಸಲಾಗುತ್ತಿದೆ. ದುರಸ್ತಿಗೊಳಿಸಿದ ಟ್ರಾನ್ಸ್‌ಫಾರ್ಮರ್‌ಗಳ ಗುಣಮಟ್ಟ ಕಾಪಾಡಿಕೊಳ್ಳಲು ಅವುಗಳನ್ನು ಕಠಿಣ ತಾಂತ್ರಿಕ ಪರೀಕ್ಷೆಗೆ ಒಳಪಡಿಸಿದ ನಂತರವೇ ಸ್ವೀಕರಿಸಲಾಗುತ್ತಿದೆ. ಗ್ಯಾರಂಟಿ ಅವಧಿಯ ಒಳಗಡೆಯೇ ಒಂದು ವೇಳೆ ವಿಫಲಗೊಂಡಲ್ಲಿ ಪುನಃ ರಿಪೇರಿಯನ್ನು ಉಚಿತವಾಗಿ ಮಾಡಲು ಗುತ್ತಿಗೆಯಲ್ಲಿ ಷರತ್ತನ್ನು ವಿಧಿಸಲಾಗಿದೆ.

ಅವಸೀಕೆರೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿ ಮಾಡುವ ಕಾರ್ಯವನ್ನು ಚನ್ನರಾಯಪಟ್ಟಣದಲ್ಲಿ ಏಪ್ರಿಲ್–2005 ರಿಂದ ಕಾರ್ಯಾರಂಭ ಮಾಡಿರುವ ದುರಸ್ತಿ ಕೇಂದ್ರದಲ್ಲಿ ನಿರ್ವಹಿಸಲಾಗುತ್ತಿದ್ದು, ಇದರ ಗುತ್ತಿಗೆಯನ್ನು ಮೆ:ಮೂರ್ತಿ ಇಂಡಸ್ಟ್ರೀಸ್ ಇವರಿಗೆ ವಹಿಸಿಕೊಡಲಾಗಿದೆ.

ಉ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಟೆಂಡರ್ ಕರೆದು ನಿಗದಿಪಡಿಸಿರುವಂತೆ, ವಿಫಲಗೊಂಡ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಗಾಗಿ ಈ ಕೆಳಗೆ ತಿಳಿಸಿರುವಂತೆ ಹಣವನ್ನು ಪಾವತಿಸಲಾಗುತ್ತಿದೆ.

1. ಪ್ರತಿಯೊಂದು 25 ಕೆ.ವಿ.ಎ. ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ದುರಸ್ತಿಗೆ	ರೂ.6050/–
2. ಪ್ರತಿಯೊಂದು 63 ಕೆ.ವಿ.ಎ.ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ದುರಸ್ತಿಗೆ	ರೂ.10,250/–
3. ಪ್ರತಿಯೊಂದು 100 ಕೆ.ವಿ.ಎ.ಸಾಮರ್ಥ್ಯದ ಟ್ರಾನ್ಸ್‌ಫಾರ್ಮರ್ ದುರಸ್ತಿಗೆ	ರೂ.13,300/–

ವಿಧಾನಸಭಾ ಸಭೆಯ ಮಾನ್ಯ ಸದಸ್ಯರಾದ ಶ್ರೀ ಎ.ಎಸ್.ಬಸವರಾಜು ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 5517ಕ್ಕೆ ಅನುಬಂಧ

ಅರಸೀಕೆರೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ 6 ತಿಂಗಳ ಅವಧಿಯಲ್ಲಿ (ಜನವರಿ–2005 ರಿಂದ ಜೂನ್–2005 ರವರೆಗೆ) ವಿಫಲವಾದ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಹೋಬಳಿವಾರು ವಿವರ

ಕ್ರ. ಸಂ.	ಹೋಬಳಿಯ ಹೆಸರು	ವಿವರ	ಜನವರಿ–05	ಫೆಬ್ರವರಿ–05
1	ಗಂಡಸಿ	ವಿಫಲವಾದ ಪರಿವರ್ತಕಗಳು	6	5
		ಬದಲಾಯಿಸಲಾದ ಪರಿವರ್ತಕಗಳು	3	4
2	ಜಾವಗಲ್	ವಿಫಲವಾದ ಪರಿವರ್ತಕಗಳು	3	3
		ಬದಲಾಯಿಸಲಾದ ಪರಿವರ್ತಕಗಳು	1	2
3	ಹಾರನಹಳ್ಳಿ	ವಿಫಲವಾದ ಪರಿವರ್ತಕಗಳು	5	11
		ಬದಲಾಯಿಸಲಾದ ಪರಿವರ್ತಕಗಳು	2	4
4	ಕಸಬಾ	ವಿಫಲವಾದ ಪರಿವರ್ತಕಗಳು	8	9
		ಬದಲಾಯಿಸಲಾದ ಪರಿವರ್ತಕಗಳು	6	11
5	ಬಾಣಾವರ	ವಿಫಲವಾದ ಪರಿವರ್ತಕಗಳು	6	7
		ಬದಲಾಯಿಸಲಾದ ಪರಿವರ್ತಕಗಳು	4	9
6	ಕಣಕಟ್ಟೆ	ವಿಫಲವಾದ ಪರಿವರ್ತಕಗಳು	9	7
		ಬದಲಾಯಿಸಲಾದ ಪರಿವರ್ತಕಗಳು	8	8

ಕ್ರ. ಸಂ.	ಹೋಬಳಿಯ ಹೆಸರು	ಮಾರ್ಚ್–05	ಏಪ್ರಿಲ್–05	ಮೇ–05	ಜೂನ್–05	ಒಟ್ಟು
1	ಗಂಡಸಿ	11	9	10	10	51
		6	3	4	5	25
2	ಜಾವಗಲ್	4	1	2	9	22
		3	1	2	3	12
3	ಹಾರನಹಳ್ಳಿ	7	7	8	9	47
		5	4	4	4	23
4	ಕಸಬಾ	12	17	13	9	68
		8	13	9	6	53
5	ಬಾಣಾವರ	4	2	8	3	30
		2	5	6	4	30
6	ಕಣಕಟ್ಟೆ	7	1	12	22	58
		6	6	13	16	57
	ಒಟ್ಟು ವಿಫಲವಾದ ಟ್ರಾನ್ಸ್ ಫಾರ್ಮರ್‌ಗಳು					256
	ಒಟ್ಟು ಬದಲಾಯಿಸಲಾದ ಟ್ರಾನ್ಸ್‌ಫಾರ್ಮರ್‌ಗಳು					200